**DW-1:** ಶ್ರೀನಿವಾಸರೆಡ್ಡಿ

ದಿನಾಂಕಃ **23.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ**

1. ಬ್ಯಾಂಕ್ ದಾಖಲೆಗಳಲ್ಲಿ ವಾದಿಯರಾದ ಇಂದಿರಮ್ಮ, ರತ್ನಮ್ಮ ಮತ್ತು ರಾಮಾಂಜಿನಮ್ಮ ರವರ Special Power of attorney holder ಆಗಿ ಹನುಮಂತರೆಡ್ಡಿ ಆಗಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. Special Power of attorney ಕೇವಲ ನ್ಯಾಯಾಲಯದ ವ್ಯಾಜ್ಯ ನಡೆಸಲು ಸೀಮಿತವಾಗಿದ್ದು ಆಸ್ತಿಗಳ ವಹಿವಾಟು ವರ್ಗಾವಣೆಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬ್ಯಾಂಕ್ ದಾಖಲೆಗಳಲ್ಲಿ ವಾದಿಯರ ಪರವಾಗಿ SPA ಎಂದು ಸಾಲ ಪಡೆದಿರುವ ಬಗ್ಗೆ ನಮೂದು ಮಾಡಿರುವ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ, ಆ ರೀತಿ ನಮೂದು ಆಗಿಲ್ಲ. ನನ್ನದು 3 ಸಾಲದ ಖಾತೆ ಮತ್ತು ನಮ್ಮ ತಂದೆಯವರದ್ದು 2 ಬ್ಯಾಂಕ್ ಸಾಲದ ಖಾತೆಗಳು ಇವೆ. ನಮ್ಮ ಸಹೋದರಿಯರು ನನ್ನ ಬ್ಯಾಂಕ್ ಸಾಲದ ಖಾತೆಗಳಲ್ಲಿ ಪಕ್ಷಗಾರರಲ್ಲ. ನನ್ನ ತಂದೆ ಪಡೆದಿರುವ ಸಾಲದ ಖಾತೆಗಳಲ್ಲಿ ವಾದಿಯರು ಪಕ್ಷಗಾರರಲ್ಲ ಎಂದರೆ ಸರಿಯಲ್ಲ. GPA ಹೊರತುಪಡಿಸಿ ವಾದಿಯರು ಸಾಲದ ಪಕ್ಷಗಾರರು ಎಂಬ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

2. ಓ.ಎಸ್. 18/2020, 21/2020, 82/2020 ಮತ್ತು 84/2020 ರ ದಾವೆಗಳಲ್ಲಿ ವಾದಿಯರು ಪಕ್ಷಗಾರರಲ್ಲ ಎಂದರೆ ಸರಿ. ನೀವು ಪಡೆದ ದಾವೆಗಳ ಸಾಲ ನನಗೆ ಮತ್ತು ನನ್ನ ಸಹೋದರನಿಗೆ ಮಾತ್ರ ಅನ್ವಯಿಸುತ್ತದೆ ಎಂದರೆ ಸರಿಯಲ್ಲ. ಬ್ಯಾಂಕ್ ಸಾಲದ ವ್ಯವಹಾರಗಳಿಗೆ ವಾದಿಯರು ಸಹಿ ಮಾಡದ ಕಾರಣ ಅವರು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. 2019 ರಲ್ಲಿ ವಾದಿಯರು ದಾವೆ ಸಲ್ಲಿಸಿದ ನಂತರ ಉದ್ದೇಶಪೂರ್ವಕವಾಗಿ ನಾನು ಸಾಲ

ಮರುಪಾವತಿ ಮಾಡದೇ ಸುಸ್ಥಿದಾರನಾಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲಗಳಿಗೂ ಮತ್ತು ವಾದಿಯರಿಗೂ ಸಂಬಂಧವಿಲ್ಲ ಮತ್ತು ನಾನು ಒಬ್ಬನೇ ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.